Government, he has ordered in No. 12 LML 81, Bangalore dated 24th November, 1982 that "under the circumstances pending publication of the census data for 1981 Government are pleased to direct that necessary orders may be made to publish important Government notices and rules in the minority languages as indicated in column No. 3 in the appended statement in addition to Kannada and English in which they are usually published" Sir, it is the direction of the Government. Even though the hon'ble Minister is telling it is absolutely wrong. "Whether it is not a fact that Constitution guarantees the implementation of three languages formula in the States." The reply is "No". Sir, which is correct, can I know that?

SRI K. H. RANGANATH.—Government statement is correct. It is not in the Constitution. It is a national policy which has been accepted by the Government of India and the respective State Governments. Respective State Governments have accepted the national policy i.e. three language policy. It does not find a place in the Constitution.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮಂತ್ರಿಗಳು ತ್ರಿಭಾಷಾ ಸೂತ್ರದ ಬಗ್ಗೆ ಹೇಳಿದ್ದಾರೆ. ಈ ಗೋಕಾಕ್ ವರದಿ ಜಾರಿ ಮಾಡುವುದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ. ಅದು ಯಾವ ಮಟ್ಟದಲ್ಲಿದೆ ಮತ್ತು ಯಾವ ಹಂತದಲ್ಲಿದೆ?.

ಶ್ರೀ ಕೆ. ಹೆಚ್. ರಂಗನಾಥ್.—ಗೋಕಾಕ್ ವರದಿ ಆದ ಮೇಲೆ ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿತು. ಆ ಆಜ್ಞೆ ಹೈಕೋರ್ಟ್‌ನಲ್ಲಿ ಸಿಂಧು ಆಗಿಲ್ಲ. ನಂತರ ೧೯೮೯ನೇ ಇಸವಿಯಲ್ಲಿ ಮತ್ತೊಂದು ಆಜ್ಞೆಯನ್ನು ಸರ್ಕಾರ ಹೊರಡಿಸಿದೆ.

ಹುಬ್ಬಳ್ಳಿ ಧಾರವಾಡ ಮಹಾನಗರ ಪ್ರದೇಶಕ್ಕೆ ಪ್ರತ್ಯೇಕ ಡಿ.ಡಿ ಪಿ.ಐ. ಕಚೇರಿ

೬೧೮. ಶ್ರೀ ಎಸ್. ಆರ್. ಮೋರೆ. (ಧಾರವಾಡ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಬ್ಬಳ್ಳಿ ಧಾರವಾಡ ಮಹಾನಗರ ಪ್ರದೇಶಕ್ಕೆ ಪ್ರತ್ಯೇಕ ಡಿಡಿಪಿಐ ಕಚೇರಿ ಬೇಕೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಸರ್ಕಾರವು ಡಿಡಿಪಿಐ ಕಚೇರಿಯನ್ನು ಮಂಜೂರು ಮಾಡುವುದರ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಇ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಸಚಿವರು).—

ಅ) ಬಂದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎಸ್. ಆರ್. ಮೋರೆ.—ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಉತ್ತರ ತೃಪ್ತಿಕರವಾಗಿಲ್ಲ. ಇವರು ೧೯೭೬ ಹಾಗೂ ೫೮ ರ ಆಂಕಿ ಅಂಶಗಳ ಆಧಾರದ ಮೇಲೆ ಈ ಉತ್ತರ ತಯಾರು ಮಾಡಿರುವುದು ಎಂದು ಕಾಣುತ್ತದೆ. ಈಗಾಗಲೇ ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ಎಂಟು ಪಟ್ಟು ಶಾಲೆಗಳು ಹೆಚ್ಚಾಗಿವೆ. ಆದ್ದರಿಂದ ಡಿಡಿಪಿಐ ಅವರಿಗೆ ಎಲ್ಲಾ ಶಾಲೆಗಳನ್ನು ತನಿಖೆ ಮಾಡಲು ಸಾಧ್ಯವಾಗುತ್ತಿಲ್ಲವಾದ ಕಾರಣ ಅಲ್ಲಿಗೆ ಪ್ರತ್ಯೇಕವಾಗಿ ಒಂದು ಡಿಡಿಪಿಐ ಕಛೇರಿ ತೆರೆಯಲು ಯೋಚನೆ ಮಾಡಿದ್ದೀರಾ ?

ಶ್ರೀ ಕೆ. ಹೆಚ್. ರಂಗನಾಥ್.—ಧಾರವಾಡ ಜಿಲ್ಲೆ ದೊಡ್ಡ ಜಿಲ್ಲೆ, ಅಲ್ಲಿ ಹದಿನೆಂಟು ತಾಲ್ಲೂಕು ಗಳಿವೆ. ಶಾಲೆಗಳು ಜಾಸ್ತಿಯಾಗಿವೆ. ಈಗ ಅಲ್ಲಿರತಕ್ಕ ಡಿಡಿಪಿಐಗೆ ಕೆಲಸ ಜಾಸ್ತಿ ಎಂದು ಸರ್ಕಾರದ ಗಮನಕೆ ಬಂದಿದೆ. ಆದರೆ ಮಾನ್ಯ ಸದಸ್ಯರು ಹುಬ್ಬಳ್ಳಿ—ಧಾರವಾಡ ನಗರದ ಸಿಟಿಗೆ ಒಬ್ಬ ಡಿಡಿಪಿಐ ಮಾಡಬೇಕೆಂದು ಪ್ರಸ್ತಾಪಮಾಡಿದ್ದಾರೆ, ಅದು ಸಾಧುವಾದಂಥ ಪ್ರಶ್ನೆ.

ಶ್ರೀ ಗೋಪಿನಾಥ್ ಆರ್. ಸಾಂದ್ರ.—೧೯೭೨ ರಿಂದ ಇವೊತ್ತಿನವರೆಗೂ ಹುಬ್ಬಳ್ಳಿ—ಧಾರವಾಡ ನಗರಕ್ಕೆ ಒಂದು ಪ್ರತ್ಯೇಕ ಡಿಡಿಪಿಐ ಆಫೀಸ್ ಆಗಬೇಕೆಂದು ಹಿಂದಿನ ಮಂತ್ರಿಗಳಿಂದ ಇಂದಿನ ಮಂತ್ರಿಗಳ ವರೆಗೂ ನಮ್ಮ ಮನವಿಗಳನ್ನು ಸಲ್ಲಿಸುತ್ತಲೇ ಬಂದಿದ್ದೇವೆ. ಹುಬ್ಬಳ್ಳಿ—ಧಾರವಾಡ ಮಹಾನಗರ ಬೆಂಗಳೂರು ನಂತರ ಇದೇ ದೊಡ್ಡ ನಗರ ಸುಮಾರು ಹತ್ತು ಲಕ್ಷ ಜನಸಂಖ್ಯೆ ಇದೆ.ನೂರಾರು ಶಾಲೆಗಳು ಆಗಿವೆ. ಸಾವಿರಾರು ಟೀಚರ್ಸ್ ಕೆಲಸ ಮಾಡುತ್ತಿದ್ದಾರೆ. ಹೈಸ್ಕೂಲುಗಳು ಸುಮಾರು ನೂರಕ್ಕೆ ಸಮೀಪ ಬಂದಿವೆ. ಆದ್ದರಿಂದ, ನಮ್ಮ ನಗರಕ್ಕೆ ಒಂದು ಪ್ರತ್ಯೇಕ ಡಿಡಿಪಿಐ ಕಛೇರಿ ಇರುವುದು ಒಳ್ಳೆಯದು. ಒಂದು ವೇಳೆ ಅಂಕೆ ಅಂಶಗಳಿಂದ ತಮಗೆ ಮನವರಿಕೆ ಮಾಡಿಕೊಟ್ಟರೆ, ತಾವು ಅಲ್ಲಿ ಒಂದು ಪ್ರತ್ಯೇಕ ಡಿಡಿಪಿಐ ಕಛೇರಿಯನ್ನು ತೆರೆಯುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ನಾನು ಇಲ್ಲ ಎಂದು ಹೇಳಲಿಲ್ಲ. ಈಗ ಇರತಕ್ಕ ಡಿಡಿಪಿಐ ಅವರು ಜಿಲ್ಲೆಯ ಎಲ್ಲಾ ಕೆಲಸ ನೋಡಲಿಕ್ಕೆ ಆಗುತ್ತದೆ ಎಂದು ನಾನು ಹೇಳಲಿಲ್ಲ ಅದು ದೊಡ್ಡ ಜಿಲ್ಲೆ ಕೆಲಸ ಜಾಸ್ತಿ ಇದೆ. ಅಲ್ಲಿ ಅವಶ್ಯಕತೆ ಇದೆ ಎಂದು ಹೇಳಿರೆ. ಆದರೆ, ಸಧ್ಯಕ್ಕೆ ನಾವು ತೆರೆಯುವುದಿಲ್ಲ ಎಂದು ಹೇಳಿದೆ.

ಶ್ರೀ ಗೋಪಿನಾಥ್ ಆರ್. ಸಾಂದ್ರ.—ಹುಬ್ಬಳ್ಳಿ ಧಾರವಾಡಕ್ಕೆ ಪ್ರತ್ಯೇಕವಾಗಿ ಒಂದು ಡಿಡಿಪಿಐ ಕಛೇರಿ ತಡೆಯುತ್ತೀರಾ? ನಾವು ಅಂಕೆ ಮೂಲಕ ಅಂಶಗಳ ಮೂಲಕ ಮನವರಿಕೆ ಮಾಡಿಕೊಡುತ್ತೇವೆ. ನಾವು ಉಳಿದಿದ್ದು ಏನೂ ಕೇಳಲಿಲ್ಲ. ಹುಬ್ಬಳ್ಳಿ ಧಾರವಾಡ ಕಾರ್ಪೊರೇಷನ್‌ಗೆ ಪ್ರತ್ಯೇಕವಾಗಿ ಒಂದು ಡಿಡಿಪಿಐ ಆಫೀಸ್ ಬೇಕಾಗಿದೆ. ನಾವು ಅದರ ಬಗ್ಗೆ ಅಂಕೆ ಅಂಶಗಳನ್ನು ಕೊಡುತ್ತೇವೆ. ತಮಗೆ ನಾವು ಹೇಳುವುದು ಸಾಧು ಎಂದು ಕಂಡುಬಂದರೆ, ಆದಷ್ಟು ಬೇಗ ತೆರೆಯುತ್ತೀರಾ?

ಶ್ರೀ ಕೆ. ಹೆಚ್. ರಂಗನಾಥ್.—ಸಾಧು ಎಂದು ಕಂಡು ಬಂದಿದೆ. ಸಧ್ಯಕ್ಕೆ ತೆರೆಯುತ್ತಿಲ್ಲ.

ಬೆಂಗಳೂರು ನಗರದಲ್ಲಿ ಭಾಷಾ ಮತ್ತು ಮತೀಯ ಅಲ್ಪಸಂಖ್ಯಾತ ಅನುದಾನಿತ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು ಪಿ.ಯು.ಸಿ. ಕಾಲೇಜುಗಳು ಮತ್ತು ಪದವಿ ಕಾಲೇಜುಗಳ ಸಂಖ್ಯೆ

೧೧೮೯. ಶ್ರೀ ಎ. ಮುನಿಸ್ವಾಮಿ (ಶಾಂತಿನಗರ).—ಮಾನ್ಯ ಶಿಕ್ಷಣ ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

೧) ಬೆಂಗಳೂರು ನಗರದಲ್ಲಿರುವ ಭಾಷಾ ಮತ್ತು ಮತೀಯ ಅಲ್ಪಸಂಖ್ಯಾತ ಅನುದಾನಿತ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು ಪಿ.ಯು.ಸಿ. ಕಾಲೇಜುಗಳು ಮತ್ತು ಪದವಿ ಕಾಲೇಜುಗಳ ಸಂಖ್ಯೆ ಎಷ್ಟು ?

೨) ಭಾಷಾ ಮತ್ತು ಮತೀಯ ಅಲ್ಪ ಸಂಖ್ಯಾತ ಪ್ರವರ್ಗಗಳ ಅಡಿಯಲ್ಲಿ ಬರುವ ಸಂಸ್ಥೆಗಳ ಹೆಸರು?.

೩) ಇವುಗಳಲ್ಲಿ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಸಂಸ್ಥೆಗಳ ಸಂಖ್ಯೆ ಎಷ್ಟು?.

೪) ಈ ಸಂಸ್ಥೆಗಳು ಶೇ ೧೮ ರಷ್ಟು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿ ದಾಖಲಾತಿ ಗಳನ್ನು ಹಾಗೂ ನೇಮಕಾತಿಗಳನ್ನು ಮಾಡುವುದರಲ್ಲಿ ಸರ್ಕಾರದ ನಿರ್ದೇಶನಗಳನ್ನು ಪಾಲಿಸುತ್ತಿದ್ದಾರೆಯೇ?.

೫) ಸರ್ಕಾರದ ನಿರ್ದೇಶನಗಳನ್ನು ಉಲ್ಲಂಘಿಸಿದ್ದಕ್ಕೆ ಈ ಸಂಸ್ಥೆಗಳ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು ?.

೬) ಸರ್ಕಾರದ ನಿರ್ದೇಶನಗಳನ್ನು ಉಲ್ಲಂಘಿಸಿದ ಇಂತಹ ಸಂಸ್ಥೆಗಳಿಗೆ ದಂಡ ವಿಧಿಸುವ ಬಗ್ಗೆ ಸರ್ಕಾರವು ಯಾವುದಾದರು ತಿದ್ದುಪಡಿ ತರುವುದೇ?.